

ಇವೆಲ್ಲದರ ನಡುವೆಯೇ ಈಜಬೇಕಾದ ಒತ್ತಡವಿದೆ ಹಾಗೂ ಸತ್ಯವನ್ನು ನುಡಿಯುವ ಮತ್ತು ಎಲ್ಲ ಬಗೆಯ ಹಿಂಸೆ, ನಿಗ್ರಹದ ವಿರುದ್ಧ ದನಿ ಎತ್ತುವ ದಾರಿಗಳನ್ನು ಕಂಡುಕೊಳ್ಳಬೇಕಿದೆ.

◆ **ಈ ಬೌದ್ಧಿಕ ಚಿಂತನೆಯ ವಲಯವನ್ನು ವಿಸ್ತಾರ ಮಾಡುವಲ್ಲಿ ಕವಿಯ ಪಾತ್ರವೇನು?**

ಕವಿಗಳು, ಎಲ್ಲ ಲೇಖಕರು, ನಮ್ಮನ್ನು ಉಸಿರುಗಟ್ಟಿಸುವ ಮತ್ತು ಸತ್ಯವನ್ನು ಮೌನವಾಗಿಸುವ ಸನ್ನಿವೇಶವನ್ನು ಬದಲಿಸಲು ಪ್ರಯತ್ನಿಸಬೇಕು. ಈ ವಿಸ್ತರಿಸುವ ಕೆಲಸದಲ್ಲಿ ಅವರಿಗೆ ಖಚಿತವಾದ ಪಾತ್ರವಿದೆ, ಯಾಕೆಂದರೆ ಸತ್ಯವನ್ನು ನುಡಿಯುವುದು ಬರಹಗಾರರ ಮೊದಲನೆಯ ಕೆಲಸ ಮತ್ತು ಕೊನೆಯ ಕೆಲಸ.

◆ **ನೀವು ಒಂದು ಕಡೆ 'ನಾವು ಗಾಂಧಿ, ಮಾರ್ಕ್ಸ್ ಮತ್ತು ಅಂಬೇಡ್ಕರ್ ನಡುವೆ ಕಟ್ಟಿಕೊಂಡಿರುವ ಗೋಡೆಗಳನ್ನು ಒಡೆದು ಹಾಕಬೇಕು' ಎಂದು ಹೇಳಿರುವಿರಿ. ಇದನ್ನು ವಿವರಿಸಬಹುದೆ? ಇವತ್ತಿನ ದಿನ, ಬಹಳ ಜನ– ವಿಶೇಷವಾಗಿ ತರುಣರು– ಗಾಂಧೀ ಚಿಂತನೆಗಳನ್ನು ವಿರೋಧಿಸುತ್ತಾರೆ. ಇದು ಚಿಂತನಶೀಲ ವಿರೋಧ ಎಂದು ನನಗೆ ಅನ್ನಿಸುವುದಿಲ್ಲ. ಈ ವಿರೋಧವು ಹೆಚ್ಚುಕಡಿಮೆ ದ್ವೇಷದ ಹಂತವನ್ನು ತಲುಪುತ್ತಿದೆ ಅಂತಲೂ ಅನ್ನಿಸುತ್ತೆ...**

ವಾಸ್ತವದಲ್ಲಿ, ಕೆಲವೇ ಕೆಲವರು ಮಾತ್ರ ಒಬ್ಬ ಚಿಂತಕನಾಗಿ, ಸಾಮಾಜಿಕ ಹೋರಾಟಗಾರರಾಗಿ ಗಾಂಧಿಯ ವಿಕಸನವನ್ನು ಗಮನಿಸಿರೋದು. ಇಂದು ಮಾರ್ಕ್ಸ್‌ರ ಕುರಿತು ವಿಸ್ತಾರ ಚರ್ಚೆಗಳಾಗುತ್ತಿದ್ದರೂ, ಗಾಂಧಿಯ ಕುರಿತು ನಡೆಯುತ್ತಿರುವ ಚರ್ಚೆ ಬಹಳ ಕಡಿಮೆ. ಅಂಬೇಡ್ಕರ್ ವಿಷಯದಲ್ಲೂ ಹೀಗೇ ಆಗಿದೆ. ಗಾಂಧಿಯವರ 'ಹಿಂದ್‌ಸ್ವರಾಜ್' ಕೃತಿಯು, ಶಕ್ತಿವಂತರ ದಬ್ಬಾಳಿಕೆ, ದುರ್ಬಲರ ಅವಲಂಬನೆ, ಬಡತನ, ಜಾತಿ ಮತ್ತು ಕೋಮುವಾದದಿಂದ ಮುಕ್ತಗೊಂಡ ನಿಜವಾದ ಸ್ವತಂತ್ರಭಾರತದ ಮುನ್ನೋಟವನ್ನು ನೀಡುವ ಬಹುಮುಖ್ಯ ಆಕರವಾಗಿದೆ. ಸ್ವತಂತ್ರ ಘಟಕಗಳಾಗಿ ಹಳ್ಳಿಗಳು, ಜಾತಿ ಕುರಿತ ವಿರೋಧ, ಅಸ್ಪೃಶ್ಯತೆ ಮತ್ತು ಧಾರ್ಮಿಕ ದ್ವೇಷ, ಪ್ರಬಲರನ್ನು ಕುರಿತಾದ ವಿಮರ್ಶೆ, ಸರ್ವಶಕ್ತವಾದ 'ಪ್ರಭುತ್ವ'ವನ್ನು ಕುರಿತ ಮುನ್ನೆಚ್ಚರಿಕೆಯಂತಹ ಗಾಂಧೀಜಿಯವರ ವಿಚಾರಗಳು ನಮ್ಮ ರಾಜಕೀಯ ವ್ಯವಸ್ಥೆಯನ್ನು ಸಮಗ್ರವಾದ ನೆಲೆಯಲ್ಲಿ ಎಂದಿಗೂ ಪ್ರವೇಶಿಸಲಿಲ್ಲ. ಕೊನೆಕೊನೆಗೆ